


**ಕ್ರಾಂತದರ್ಶನ**
ಲೇ: ವಸಂತ ದಿವಾಣಜಿ
(ಕುಸುಮಾಕರ ದೇವರಗೆಣ್ಣೂರು)
ಪು: 160 ಬೆ: ₹ 160
ಪ್ರ: ಸಾಹಿತ್ಯ ಭಂಡಾರ
ಜಂಗಮಮೇಸ್ತ್ರಿ ಗಲ್ಲಿ, ಬಳೇಪೇಟೆ,
ಬೆಂಗಳೂರು – 560 053

ಕೇವಲ ಬೇಂದ್ರೆಯವರ ಕಾವ್ಯಕ್ಕೆ ಹಾದಿ ತೆರೆಯುತ್ತಿಲ್ಲ. ಒಟ್ಟಾರೆ ಕಾವ್ಯದ ಅಂತಃಸ್ಸತ್ವವನ್ನೇ ಬಗೆಯುತ್ತಿದ್ದಾರೆ. ಬೇಂದ್ರೆ ಕಾವ್ಯದಲ್ಲಿ ಶಬ್ದ, ಭಾಷೆ, ಪ್ರತಿಮೆ, ನಾದ, ಪ್ರಾಸಗಳ ಪರಸ್ಪರ ಸಂಬಂಧವೇನು; ಅವರ ಕಾವ್ಯದಲ್ಲಿ ತಂತ್ರ, ಸಾಮಾಜಿಕತೆ, ವೈಚಾರಿಕತೆಗಳ ಸ್ಥಾನವೇನು ಮತ್ತು ಬೇಂದ್ರೆಯಾಗಿ, ಅಂಬಿಕಾತನಯದತ್ತನಾಗಿ ಅವರ ವ್ಯಕ್ತಿವಿಶಿಷ್ಟ ಪ್ರಜ್ಞೆ ಏನಿತ್ತು ಎಂಬ ವಿಚಾರದಲ್ಲಿ ಇಡೀ ಪುಸ್ತಕದ ಒಟ್ಟಾರೆ ನೋಟವೊಂದನ್ನು ಈ ಲೇಖನ ನಮಗೆ ಸ್ಥೂಲವಾಗಿ ಒದಗಿಸುತ್ತದೆ.

'ಗಾಳಿ ಹೆಜ್ಜೆ ಹಿಡಿದ ಸುಗಂಧ' ಈಗಾಗಲೇ ಹಲವು ಬಾರಿ ಮುದ್ರಿತಗೊಂಡು, ಬೇಂದ್ರೆ ಅಭ್ಯಾಸಿಗಳಿಗೆ ಬಹು ಅಚ್ಚುಮೆಚ್ಚು ಎನಿಸಿಕೊಂಡ ಕೃತಿ. ಇಲ್ಲಿ ದಿವಾಣಜಿಯವರು ಭಾಷೆ ಮತ್ತು ಕಾವ್ಯದ ಸಂಬಂಧವನ್ನು, ಅದರ ವಿವಿಧ ಸೂಕ್ಷ್ಮ ಪಾತಳಿಗಳನ್ನು, ಅರ್ಥ ಮತ್ತು ಅನುಭವದ ಅಂತರ ಸಹಿತ ವಿವರಿಸುತ್ತಾರೆ. ನಾವು ಶಿಕ್ಷಣದಿಂದಲೇ ಹೇಗೆ ಕಂಡೀಶನ್ಡ್ ಓದಿಗೆ ಸಿದ್ಧಗೊಂಡಿರುತ್ತೇವೆ ಮತ್ತು ಅದೇ ಕಾವ್ಯವನ್ನು ಆಸ್ವಾದಿಸಲು ಬಹುದೊಡ್ಡ ತೊಡಕಾಗಿದೆ ಎನ್ನುವುದನ್ನು ವಿವರಿಸುವುದೇ ಈ ಲೇಖನದ ಕೇಂದ್ರ ಆಶಯ. ಸಾಹಿತ್ಯ, ಅದರಲ್ಲೂ ವಿಶೇಷವಾಗಿ ಕಾವ್ಯ, ಸರಳವಾಗಿ, ಸಹಜವಾಗಿ ಮತ್ತು ಸುಲಭವಾಗಿ ಮಂದಿಯನ್ನು ತಲುಪಬಹುದಾದ ವಸ್ತು. ಆದರೆ, ನಮ್ಮ ಶಿಕ್ಷಣ ಕ್ರಮ ಅದನ್ನು ಅನಗತ್ಯವಾಗಿ ಕಠಿಣಗೊಳಿಸಿದೆ. ಅರ್ಥಕ್ಕೆ ಮಹತ್ವಕೊಡುವ ಶಿಕ್ಷಣದಿಂದಾಗಿ ಅದು ಜನರಿಂದ ದೂರವಾಗುತ್ತಿದೆ. ಇದರಿಂದ ಮನುಷ್ಯನ ಹೃದಯ ಆರ್ದ್ರತೆ ಕಳೆದುಕೊಂಡು ಮರುಭೂಮಿಯಾಗುತ್ತದೆ ಎಂಬರ್ಥದ ಮಾತುಗಳನ್ನು ದಿವಾಣಜಿ ಹೇಳುತ್ತಾರೆ. ಇವತ್ತು ನಾವು ಅದು ನಿಜವಾಗಿರುವುದನ್ನು, ಅದರ ಪರಿಣಾಮಗಳನ್ನು ಕಾಣುತ್ತಿದ್ದೇವೆ.

'ಅಂತಃಸ್ಫುರಣ' ಎಂಬ ಮೂರನೆಯ ಮತ್ತು ಇಡೀ ಪುಸ್ತಕದ ಅತ್ಯಂತ ಮಹತ್ವದ ಭಾಗದಲ್ಲಿ ಬೇಂದ್ರೆಯವರ ಒಟ್ಟು ಹನ್ನೆರಡು ಕವಿತೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ದಿವಾಣಜಿಯವರು ಆಡಿದ ಮಾತುಗಳಿವೆ. ಬೇಂದ್ರೆಯವರ ಕಾವ್ಯಶ್ರೇಣಿಯ ಬೇರೆ ಬೇರೆ ಕವಿತೆಗಳೊಂದಿಗೆ ಇರುವ ಅಂತರ್‌ಸಂಬಂಧವನ್ನು ನಿರಂತರವಾಗಿ ಗಮನದಲ್ಲಿರಿಸಿಕೊಂಡೇ ಆಡಿರುವ ಮಾತುಗಳಾಗಿರುವುದರಿಂದ ದಿವಾಣಜಿಯವರು ಪ್ರತಿಯೊಂದು ಕವಿತೆಯ ಬಗ್ಗೆ ಬೇರೆ ಬೇರೆಯಾಗಿ ಆಡಿದ ಮಾತುಗಳಾಗಿ ಇವು ಬರುವುದಿಲ್ಲ. ಅರವಿಂದ – ಶ್ರೀಮಾತೆ(ಮದರ್)ಯರ, ಜಿಡ್ಡು ಕೃಷ್ಣಮೂರ್ತಿಯವರ, ಅನುಭಾವದ, ಅಧ್ಯಾತ್ಮದ ಸೆಲೆ ಈ ಯಾವತ್ತೂ ಕವಿತೆಗಳಲ್ಲಿರುವುದನ್ನು ಅವರು ಗಮನಿಸುತ್ತಲೇ ಬೇಂದ್ರೆಯವರ ಕವಿತೆಗಳ ಬಗ್ಗೆ ಅದುವರೆಗೂ ಬಂದಿದ್ದ ಕೆಲವು ವಿಮರ್ಶಾತ್ಮಕ ನಿಲುವುಗಳನ್ನು ಎತ್ತಿಕೊಂಡು, ಅವುಗಳು ಹುಟ್ಟಿರಬಹುದಾದ ನೆಲೆಯನ್ನೂ ಅದರ ತಾರ್ಕಿಕ ಸತ್ಯಾಸತ್ಯತೆಯನ್ನೂ ಸ್ಫುಟಗೊಳಿಸುತ್ತ ಹೋಗುತ್ತಾರೆ. ಅವರು ಹೀಗೆ ಮಾಡುವಾಗ